

‘ನಾನು ಅಪ್ಪ ಅಮ್ಮ ಅಣ್ಣ ತಮ್ಮ ಎಲ್ಲರೂ ಒಟ್ಟಿಗೆ ಇದ್ದ ತುಂಬು ಕುಟುಂಬ. ನಾನು ಎಲ್ಲಾ ಮನುಷ್ಯರಂತೆ ಸಾಮಾನ್ಯವಾಗಿ ಬದುಕುತ್ತಿದ್ದವನು. ಆ ಗುಂಪು ಮಾಡುತ್ತಿದ್ದ ಜಾತಿಶೋಷಣೆಯನ್ನು ಸಹಿಸಿಕೊಂಡು ಬದುಕುತ್ತಿದ್ದೆ. ಆದರೆ ನನ್ನೊಳಗಿನ ಜಾಗೃತಿ ನನ್ನನ್ನು ಸದಾ ಎಚ್ಚರಿಸುತ್ತಲೇ ಬಂತು, ಆದರೆ ತೀಟೆಸೊಪ್ಪಿನ ಹಾಗೆ. ಬಿಟ್ಟಿ ಚಾಕರಿ, ದೇವಸ್ಥಾನಗಳಿಗೆ ದಲಿತರ ಪ್ರವೇಶ ನಿಷಿದ್ಧ, ಹೋಟೆಲ್‌ಗಳಲ್ಲಿ ದಲಿತರಿಗೆ ಪ್ರತ್ಯೇಕ ಲೋಟ ಇವುಗಳೆಲ್ಲದ್ದರ ವಿರುದ್ಧ ಪ್ರತಿಭಟಿಸಿದೆ. ಯಾರೂ ನನ್ನ ಬೆನ್ನಿಗೆ ನಿಲ್ಲಲಿಲ್ಲ. ಊರ ಶಾನಭಾಗರಿಗೆ ಕಣ್ಣು ಕುರವಾದೆ. ಇದರ ನಡುವೆ ನನ್ನ ತಮ್ಮ ಮೇಲುಸ್ತರದ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಷಯ ಒಂದು ದಿನ ಇಡೀ ಊರಿಗೆಲ್ಲಾ ಹಬ್ಬಿತು. ವಿಷಯ ತಿಳಿದ ಹುಡುಗಿಯ ಅಪ್ಪ–ಅಮ್ಮ ಊರ ಮುಖಂಡರಿಗೆಲ್ಲಾ ತಿಳಿಸಿ, ಅವನನ್ನು ಬೆತ್ತಲೆ ಮಾಡಿ ಲೈಟು ಕಂಬಕ್ಕೆ ಕಟ್ಟಿ, ಬಾಯಿಗೆ ಬಂದ ಮಾತುಗಳನ್ನೆಲ್ಲಾ ಬೈದು, ಗೇಮೆ ಮಾಡುವಾಗ ಪದೇ ಪದೇ ನೊಗ ಕಳಚುವ ಪಡ್ಡೆಕರುವಿಗೆ ಬಾರುಗೋಲಿನಿಂದ ಬಾರಿಸಿದಂಗೆ ಬಾರಿಸಿದರು. ತೊಗಲು ಹರಿವ ಹಾಗೆ. ನಾನು ಆ ವಿಷಯವಾಗಿ ಪೊಲೀಸ್ ಠಾಣೆಗೂ ದೂರು ಕೊಟ್ಟೆ, ಅಟ್ರಾಸಿಟಿ ಕಾಯ್ದೆ ಅಡಿ. ನನ್ನ ಬೆಂಬಲಿಸಿ ಹೇಳುವ ಯಾವ ಸಾಕ್ಷಿಯೂ ಮುಂದೆ ಬರಲಿಲ್ಲ. ಕೇಸು ಫಲಕಾರಿಯಾಗದೆ, ನ್ಯಾಯಾಲಯದಲ್ಲಿ ಮಕಾಡೆ ಮಲಗಿತು. ಇದನ್ನ ತಿಳಿದ ಸವರ್ಣಿಯರು, ‘ನಮ್ಮನ್ನು ಯಾರೂ ಕೆಲಸಕ್ಕೂ ಕರೆಯಕೂಡದು. ಇವರಿಗೆ ಕ್ಷೌರ ಮಾಡಕೂಡದು’ ಎಂದು ಊರಿನ ಜನರಿಗೆ ಕಟ್ಟಪ್ಪಣೆ ವಿಧಿಸಿದರು. ಬೇರೊಂದು ಊರಿನ ಜನರ ಮನೆಗೆ ಹೋಗಿ ಭಿಕ್ಷೆ ಬೇಡಿ ತಿನ್ನುವ ಸ್ಥಿತಿ ನಿರ್ಮಾಣವಾಯಿತು. ನನ್ನ ತಮ್ಮ ತೊರೆದ ಪ್ರೀತಿ, ಆದ ಅವಮಾನ ತಾಳಲಾರದೆ ಕುಮುಲಿ ಪ್ರೀತಿಯ ನೆನಪಿನಲ್ಲೇ ಅನ್ನ ನೀರು ಬಿಟ್ಟು ಅಸುನೀಗಿದ. ಎಂತಹ ನಿಷ್ಕರುಣೆ ಸಮಾಜದ ನಡುವೆ ನಾವಿದ್ದೇವೆಂದು ನನ್ನೊಳಗೆ ಅಸಹ್ಯಪಟ್ಟುಕೊಂಡೇ ಯೋಚಿಸಿದೆ. ಮನಸ್ಸು ಸಮಾಧಾನಕ್ಕೆ ಬರಲೇ ಇಲ್ಲ. ಆದರೂ ಎಲ್ಲವನ್ನು ಸಹಿಸಿಕೊಂಡು ಸುಮಾರು ದಿನಗಳನ್ನು ಕಳೆದೆ.

ಹೇಗೋ ಕೂಲಿ ನಾಲಿ ಮಾಡಿ ಜೀವನ ಸಾಗುತ್ತಿತ್ತು. ಗಂಜಿ ಕುಡಿದರೂ ಸಂಸಾರ ಚೆನ್ನಾಗಿತ್ತು. ನನ್ನ ಹೆಂಡತಿಗೆ ನಾನು ಅಂದರೆ ಪ್ರಾಣ. ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಳು. ನೋಡಲಿಕ್ಕೆ ನನ್ನ ಹೆಂಡತಿ ರೂಪವತಿಯಾಗಿದ್ದಳು. ಒಡವೆ ಧರಿಸದೆಯೂ ಹಳೇ ಸೀರೆ ಉಟ್ಟರೂ ಅವಳ ರೂಪ ಎಂತಹವರ ಕಣ್ಣನ್ನೂ ಸಹ ಕುಕ್ಕುವಂತಿತ್ತು.